ಜೆಎಸ್ಎಸ್ ಮಹಾವಿದ್ಯಾಪೀಠ

# ಜೆಎಸ್ಎಸ್ ಮಹಿಳಾ ಕಾಲೇಜು

ಚಾಮರಾಜನಗರ ವಿಶ್ವವಿದ್ಯಾನಿಲಯಕ್ಕೆ ಸಂಯೋಜಿತ, ನ್ಯಾಕ್‌ನಿಂದ B+ (CGPA: 2.74) ಮಾನ್ಯತೆ ಪಡೆದಿದೆ

**ಕೊಳ್ಳೇಗಾಲ – 571 440 ಚಾಮರಾಜನಗರ ಜಿಲ್ಲೆ**

☎: 08224-252149 🖷: 08224-256051 jsscwk@gmail.com www. jsscwkgl.org

## ಪ್ರಕಟಣೆ ಕೃಪೆಗಾಗಿ

ಕೊಳ್ಳೇಗಾಲ: 27.2.2026 ಜೆಎಸ್ಎಸ್ ಮಹಿಳಾ ಕಾಲೇಜಿನಲ್ಲಿ ಐಕ್ಯೂಎಸಿ & ಪ್ಲೇಸ್‌ಮೆಂಟ್ ಸೆಲ್ ವತಿಯಿಂದ 23.2.2026 ರಿಂದ 27.2.2026ರವರೆಗೆ ನಡೆದ 5 ದಿನದ ಸಾಫ್ಟ್‌ಸ್ಕಿಲ್ ತರಬೇತಿ ಕಾರ್ಯಕ್ರಮದ ಸಮಾರೋಪ ಸಮಾರಂಭವನ್ನು ಆಯೋಜಿಸಲಾಗಿತ್ತು.

ಶ್ರೀಮತಿ ಎಸ್ ಪ್ರೀತಿಲೇಖ, ತರಬೇತುದಾರರು, ನಾಂದಿ ಫೌಂಡೇಷನ್, ಬೆಂಗಳೂರು ಇವರು ಸಮಾರೋಪ ನುಡಿಗಳನ್ನಾಡುತ್ತಾ ವಿದ್ಯಾರ್ಥಿಗಳಿಗೆ ಬೋಧನೆ ಮಾಡುವುದು ನಮ್ಮ ಕರ್ತವ್ಯ. ಈ ಕಾರ್ಯಕ್ರಮದಲ್ಲಿ ಕಲಿತದ್ದನ್ನು ಇಲ್ಲಿಗೆ ಬಿಡದೆ ಜೀವನ ಪೂರ್ತಿ ಅಳವಡಿಸಿಕೊಳ್ಳಬೇಕು. ಓದು ಎಷ್ಟು ಮುಖ್ಯವೋ ನಮ್ಮ ಕೌಶಲ್ಯವು ಅಷ್ಟೇ ಮುಖ್ಯ. ವಿದ್ಯಾರ್ಥಿಗಳು ಸಮಯ ನಿರ್ವಹಣೆಗೆ ಹೆಚ್ಚು ಪ್ರಾಮುಖ್ಯತೆ ಕೊಡಬೇಕು ಎಂದು ತಿಳಿಸಿದರು. ಈ ಕೌಶಲ್ಯಗಳು ಈ ದಿನಕ್ಕೆ ಸೀಮಿತವಾಗದೆ ವಿಸ್ತಾರವಾಗಬೇಕು ಎಂದು ಸ್ಪೂರ್ತಿದಾಯಕ ಮಾತುಗಳನ್ನು ನುಡಿದರು.

ಐಕ್ಯೂಎಸಿ ಸಂಚಾಲಕರಾದ ಶ್ರೀಮತಿ ಎಸ್. ಮಮತರವರು ಮಾತನಾಡಿ ಸ್ಪರ್ಧಾತ್ಮಕ ಯುಗದಲ್ಲಿ ಈ ಕೌಶಲ್ಯಗಳು ಐದು ದಿನಕ್ಕೆ ಸೀಮಿತವಾಗದೆ ಈ ತರಬೇತಿಯಲ್ಲಿ ಕಲಿತ ನಾಯಕತ್ವ ಗುಣವನ್ನು ಜೀವನ ಪರ್ಯಂತ ಅಳವಡಿಸಿಕೊಳ್ಳುವ ಹಿನ್ನೆಲೆಯಲ್ಲಿ ಇಂತಹ ತರಬೇತಿಗಳು ಬಹಳ ಪ್ರಾಮುಖ್ಯತೆ ಹೊಂದುತ್ತವೆ. ಇದರಿಂದ ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನಗೊಳ್ಳುತ್ತದೆ. ದಿನನಿತ್ಯದ ಜೀವನಕ್ಕೆ ತುಂಬಾ ಅಗತ್ಯ ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಪ್ರಾಂಶುಪಾಲರಾದ ಡಾ ಹೆಚ್ ಎಸ್ ಕೊಂಗಳಪ್ಪರವರು ಪದವಿ ಅನ್ನೋದು ಪ್ರಮಾಣ ಪತ್ರಕ್ಕಷ್ಟೆ ಸೀಮಿತವಾದರೆ, ಕೌಶಲ್ಯಗಳು ಜೀವನದಲ್ಲಿ ತುಂಬಾ ಅಗತ್ಯ. Degree is a just piece of paper. But Skill is most important. ಸಂವಹನ ಕೌಶಲ್ಯ ಆಧುನಿಕ ಜಗತ್ತಿನಲ್ಲಿ ತುಂಬಾ ಮುಖ್ಯವಾಗುತ್ತದೆ ಎಂದು ತಿಳಿಸಿದರು.

ಚಟುವಟಿಕೆಗಳಲ್ಲಿ ಉತ್ತಮವಾಗಿ ಭಾಗವಹಿಸಿದ ವಿದ್ಯಾರ್ಥಿಗಳಿಗೆ ಬಹುಮಾನಗಳನ್ನು ವಿತರಿಸಲಾಯಿತ್ತು. ವಿದ್ಯಾರ್ಥಿಗಳು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಶ್ರೀಮತಿ ಅನಿತರಾಜ್, ತರಬೇತುದಾರರು, ನಾಂದಿಫೌಂಡೇಷನ್, ಬೆಂಗಳೂರು ಹಾಗೂ ಪ್ಲೇಸ್‌ಮೆಂಟ್ ಸೆಲ್‌ನ ಸಂಚಾಲಕರಾದ ಶ್ರೀಮತಿ ಭವ್ಯ ಬಿ ಆರ್ ರವರು ಉಪಸ್ಥಿತರಿದ್ದರು. ಅಂತಿಮ ಪದವಿ ವಿದ್ಯಾರ್ಥಿನಿಯರು ಪಾಲ್ಗೊಂಡಿದ್ದರು.



ಐಕ್ಯೂಎಸಿ & ಪ್ಲೇಸ್‌ಮೆಂಟ್ ಸೆಲ್ ವತಿಯಿಂದ ಐದು ದಿನಗಳವರೆಗೆ ನಡೆದ ಸಾಫ್ಟ್‌ಸ್ಕಿಲ್ ತರಬೇತಿ ಕಾರ್ಯಕ್ರಮದ ಸಮಾರೋಪ ಸಮಾರಂಭ ಕಾರ್ಯಕ್ರಮ




ಶ್ರೀಮತಿ ಎಸ್ ಪ್ರೀತಿಲೇಖ, ತರಬೇತುದಾರರು, ನಾಂದಿ ಫೌಂಡೇಷನ್, ಬೆಂಗಳೂರು ಇವರು ಮಾತನಾಡುತ್ತಿರುವುದು. ಚಿತ್ರದಲ್ಲಿ ಪ್ಲೇಸ್‌ಮೆಂಟ್ ಸೆಲ್‌ನ ಸಂಚಾಲಕರಾದ ಶ್ರೀಮತಿ ಭವ್ಯ ಬಿ ಆರ್, ಐಕ್ಯೂಎಸಿ ಸಂಚಾಲಕರಾದ ಶ್ರೀಮತಿ ಎಸ್ ಮಮತರವರು, ಪ್ರಾಂಶುಪಾಲರಾದ ಡಾ.ಹೆಚ್ ಎಸ್ ಕೊಂಗಳಪ್ಪರವರು ಹಾಗೂ ಶ್ರೀಮತಿ ಅನಿತರಾಜ್, ತರಬೇತುದಾರರು, ನಾಂದಿಫೌಂಡೇಷನ್, ಬೆಂಗಳೂರು ಉಪಸ್ಥಿತರಿದ್ದರು